ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬ.ಪಾ.ಕೆ/ /18-19

(1) ಮುಖ್ಯ ಆಡಳಿತಾಧಿಕಾರಿಗಳು (ಪೂರ್ವ, ಪಶ್ಚಿಮ, ದಕ್ಷಿಣ, ಮಹದೇವಪುರ ವಲಯಗಳು),
ಜಂಟಿ ಆಯುಕ್ತರುಗಳು, ರಾಜರಾಜೇಶ್ವರಿ ವಲಯ, ಯಲಹಂಕ-ಕೋಡಿ, ಬೊಮ್ಮನಹಳ್ಳಿ ವಲಯ
ಎಲ್ಲ ಮುಖ್ಯಾಧಿಕಾರಿಗಳು)

ವಿಷಯ:-ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ವಿವಿಧ ಬೃಹತ್ ಕೈಗಾರಿಕೆ ಅಡಿಯಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು ಮೆಃಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ನೀಡಿದ ಆದೇಶದ ತಿದ್ದುಪಡಿಯ ಬಗ್ಗೆ

ಉಲ್ಲೇಖ:-(1)ಸರ್ಕಾರದ ಆದೇಶ ಕಾರ್ಯದರ್ಶಿ ಕಛೇರಿ ಆದೇಶ ಸಂಖ್ಯೆ:ಇ೦/144/ಮೇಸ್ಕಾ-12/2018, ದಿ:06.04.18
(2)ಈ ಕಛೇರಿಯ ಆದೇಶದ ಸಂಖ್ಯೆ:ಆ/ಬ.ಪಾ.ಕೆ/8075/2018-19, ದಿ:11-07-2018.
(3)ಈ ಕಛೇರಿಯ ಪತ್ರದ ಸಂಖ್ಯೆ:ಆ/ಬ.ಪಾ.ಕೆ/8054/2017-18, ದಿ:20-11-2017.

.....

ಮೇಲ್ಕಂಡ ಉಲ್ಲೇಖ (1) ರ ಆದೇಶದಲ್ಲಿ ಮೆಃಕೆ.ಆರ್.ಐ.ಡಿ.ಎಲ್ ಸಂಸ್ಥೆಯವರಿಗೆ 2018-19 ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದ ಬಲಾವಣೆಗಳು ಮತ್ತು ಇತರೆ ಸಂಗಮ ಸಂಸ್ಥೆಗಳ ಕಾಮಗಾರಿಗಳನ್ನು ಪಾರದರ್ಶಕ ಅಧಿನಿಯಮ - 1999 ರ ಕಲಂ 4 (ಜಿ) ಅಡಿ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿ ಸರ್ಕಾರವು ಅಧಿಸೂಚನೆ ಜಾರಿ ಮಾಡಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು (ಮೂಲ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಅವಧಿ ಮುಗಿಯುವ ಮೊದಲು ಮಾಡುವ ವಿಶೇಷ ಕಾಮಗಾರಿಗಳು ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೇಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಒಳಗೊಂಡಂತೆ) ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ತದನಂತರ ಮೇಲ್ಕಂಡ ಉಲ್ಲೇಖ (1) ರ ಆದೇಶದಲ್ಲಿ ಪ್ರಸ್ತಾಪಿತ ಷರತ್ತುಗಳಿಗೆ ನಿಯಮಾನುಸಾರ ಕ್ರಮವಹಿಸಿ, ಮೆಃಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಮೇಲ್ಕಂಡ ಉಲ್ಲೇಖ (2) ರ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಉಲ್ಲೇಖ (2) ಆದೇಶದಲ್ಲಿ ಆದೇಶಿಸಿದಂತೆ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು (ಮೂಲ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಅವಧಿ ಮುಗಿಯುವ ಮೊದಲು ಮಾಡುವ ವಿಶೇಷ ಕಾಮಗಾರಿಗಳು ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೇಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಒಳಗೊಂಡಂತೆ) ಅನುಷ್ಠಾನಗೊಳಿಸಲು ಮೆಃಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸುವ ಕ್ರಮವನ್ನು ತಿದ್ದುಪಡಿ ಮಾ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

"2018-19 ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹ ಸಂಸ್ಥೆಗಳ ಕಾಮಗಾರಿಗಳನ್ನು ಪಾರದರ್ಶಕ ಅಧಿನಿಯಮ – 1999 ರ ಕಲಂ 4 (ಜಿ) ಅಡಿ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿ ಸರ್ಕಾರವು ಅಧಿಸೂಚನೆ ಜಾರಿ ಮಾಡಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 2018-19ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು ಮೇಲ್ಕಂಡ ಉಲ್ಲೇಖ (3) ರ ಆದೇಯಲ್ಲಿ ಆದೇಶಿಸಿದಂತೆ ಪ್ರತಿ ಕಾಮಗಾರಿಗಳನ್ನು (ರೂ.50.00 ಲಕ್ಷಗಳಿಗೆ ಮೀರದಂತಹ ಕಾಮಗಾರಿಗಳು) ರ್ಯಾಡಂಮೈಜೇಷನ್ ಮಾಡಿ ಸದರಿ ಆದೇಶದಂತೆ

30 ಕಳ್ಳ 22/09/18
20/9/18

ಕ್ರಮವಹಿಸಿ ಇತರೆ ವರ್ಗಕ್ಕೆ ಮೀಸಲಿದಲಾದ ತುರ್ತು ಕಾಮಗಾರಿಗಳನ್ನು ಮುಖ್ಯ ಅಭಿಯಂತರರು ರವರ ಶಿಫಾರಸ್ಸಿನಂತೆ (ಪೂಜ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳನ್ನು ಹೊರತುಪಡಿಸಿ) ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ತದನಂತರ ಮೇಲ್ಕಂಡ ಉಲ್ಲೇಖ (1) ರ ಅಡಿಯಲ್ಲಿ ಪ್ರಸ್ತಾಪಿತ ಷರತ್ತುಗಳಿಗೆ ನಿಯಮಾನುಸಾರ ಕ್ರಮವಹಿಸಿ ಮೆ॥ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಿದೆ".

"ಪೂಜ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸುವ ಪ್ರಸ್ತಾವನೆಗಳನ್ನು ಮೇಲ್ಕಂಡ ಉಲ್ಲೇಖ (3) ರ ಅಡಿಯಲ್ಲಿ ಸೂಚಿಸಿದಂತೆ ಪ್ರತ್ಯೇಕ ಕಾಮಗಾರಿಗಳನ್ನು (ರೂ.50.00 ಲಕ್ಷಗಳಿಗೆ ಮೀರದಂತಹ ಕಾಮಗಾರಿಗಳಿಗೆ ಮಾತ್ರ) ರ್ಯಾಟಿಫಿಕೇಷನ್ ಮಾಡಿ ಆದೇಶದಲ್ಲಿ ತಿಳಿಸಿದಂತೆ ಕ್ರಮವಹಿಸಿ, ತದನಂತರ ಎಲ್ಲಾ ಪ್ರತ್ಯೇಕ ಪ್ರಸ್ತಾವನೆಗಳನ್ನು ಪ್ರಧಾನ ಅಭಿಯಂತರರು ರವರ ಮುಖಾಂತರ ವಿಶೇಷ ಆಯುಕ್ತರು (ಯೋಜನೆ) ರವರ ಅನುಮೋದನೆ ಪಡೆದು ನೇರವಾಗಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಎಲ್ಲಾ ಮುಖ್ಯ ಅಭಿಯಂತರರುಗಳು ಮತ್ತು ಕಾರ್ಯಪಾಲಕ ಅಭಿಯಂತರರುಗಳು ಕ್ರಮ ವಹಿಸುವುದು".

ಸದರಿ ಆದೇಶವು ತತಕ್ಷಣದಿಂದ ಜಾರಿಗೆ ಬರುತ್ತಿದ್ದು, ಸದರಿ ಆದೇಶವು ಈಗಾಗಲೇ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಮಿಲು ಸೂಕ್ತ ಆದೇಶಕ್ಕಾಗಿ ಚಲಾವಣೆಯಲ್ಲಿರುವ ಕಡತಗಳಿಗೂ ಸಹ ಅನ್ವಯಿಸುತ್ತಿದ್ದು, ಅಂತಹ ಕಡತಗಳನ್ನು ತತಕ್ಷಣ ಒಂಬಡೆದು. ಮೇಲ್ಕಂಡ ಆದೇಶದಂತೆ ಕ್ರಮವಹಿಸಲು ಸೂಚಿಸಿದೆ.

ಆಯುಕ್ತರು 22/1/14
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-
1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಆಡಳಿತ ಪಕ್ಷದ / ವಿರೋಧ ಪಕ್ಷ / ಜೆಡಿಎಸ್ (ಪಕ್ಷ) ದ ನಾಯಕರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
6. ಪ್ರಧಾನ ಅಭಿಯಂತರರು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ /ಮಾನ್ಯ ವಿಶೇಷ ಆಯುಕ್ತರು (ಪಣಕಾಸು) / ಮಾನ್ಯ ವಿಶೇಷ ಆಯುಕ್ತರು (ಯೋಜನೆ)/ ಮಾನ್ಯ ಅಪರ ಆಯುಕ್ತರು (ಆಡಳಿತ) / ಮಾನ್ಯ ಅಪರ ಆಯುಕ್ತರು (ಆರೋಗ್ಯ) / ಮಾನ್ಯ ಅಪರ ಆಯುಕ್ತರು (ಕಲ್ಯಾಣ) ರವರುಗಳಿಗೆ ಕಳುಹಿಸಿದೆ.
ಮಾನ್ಯ ಉಪ ಆಯುಕ್ತರು (ಆಡಳಿತ) / ಮುಖ್ಯ ಲೆಕ್ಕಾಧಿಕಾರಿಗಳು / ಮುಖ್ಯ ಲೆಕ್ಕ ಪರಿಶೋಧಕರು / ಸಹಾಯಕ ನಿಯಂತ್ರಕರು (ಪಣಕಾಸು) ರವರುಗಳಿಗೆ ಕಳುಹಿಸಿದೆ.
ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
ಎಲ್ಲಾ ವಲಯ ಸಹಾಯಕ ನಿಯಂತ್ರಕರು (ಪಣಕಾಸು) ರವರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳಿಗೆ ಕಳುಹಿಸುತ್ತಾ, ಪ್ರಸ್ತಾಪಿತ ವಿಷಯದ ಬಗ್ಗೆ ವೈಯಕ್ತಿಕ ಗಮನಹರಿಸಲು ಸೂಚಿಸಿದೆ.
ಎಲ್ಲಾ ಯೋಜನಾ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳಿಗೆ ಕಳುಹಿಸುತ್ತಾ ಪ್ರಸ್ತಾಪಿತ ವಿಷಯದ ಬಗ್ಗೆ ವೈಯಕ್ತಿಕ ಗಮನಹರಿಸಲು ಸೂಚಿಸಿದೆ.

30 8 dg 1 · 30/9/20.